

ಶಿವಲಿಂಗಪ್ಪ ಹಂದಿಹಾಳು ಅವರೊಂದಿಗೆ ಸಂದರ್ಶಕ ದಸ್ತಗೀರಸಾಬ್ ದಿನ್ನಿ

**ಬಳಸಿದ್ದು , ಕಲಾವಿದರಿಂದ ಕಥೆ ಓದಿಸಿದ್ದು, ಕ್ಯೂಆರ್ ಕೋಡ್ ಕೊಟ್ಟದ್ದು ವಿಶೇಷವಾಗಿದೆ. ಈ ಪ್ರಯೋಗ ಹೊಳೆದದ್ದು ಹೇಗೆ?**

ನನ್ನ ಬಾಲ್ಯಕಾಲದಲ್ಲಿ ನನ್ನನ್ನು ಪುಸ್ತಕದ ಕಡೆ ಸೆಳೆದಿದ್ದು, ನಾನು ಕಥೆಗಳನ್ನು ಓದುವ ಹಾಗೆ ಮಾಡಿದ್ದು ಅಲ್ಲಿನ ಕಥಾವಸ್ತುವಿಗಿಂತ ಬಹುವರ್ಣದ ಚಿತ್ರಗಳೇ. ಹಾಗಾಗಿ ಮಕ್ಕಳ ಪುಸ್ತಕಗಳೆಂದರೆ ಹೀಗೆಯೇ ಇರುತ್ತವೆ ಎಂದುಕೊಂಡಿದ್ದೆ. ನಾನು ಬರೆದು ಪ್ರಕಟಪಡಿಸುವ ಸಂದರ್ಭಕ್ಕೆ ನೋಡಿದರೆ ಹೆಚ್ಚು ಕಪ್ಪು- ಬಿಳುಪು ಬಣ್ಣದ ಪುಸ್ತಕಗಳು ಕಂಡವು. ನನಗೆ ಮಕ್ಕಳ ಸಾಹಿತ್ಯದ ಅನನ್ಯತೆಯನ್ನು ಪ್ರಚುರಪಡಿಸುವ ಮಾರ್ಗ ಇದಲ್ಲವೆನಿಸಿತು. ಹಾಗಾಗಿ ನನ್ನ ‘ನೋಟ್‌ಬುಕ್’ ಸಂಕಲನದ ಪ್ರತಿಪುಟವೂ ವರ್ಣಮಯವಾಗಿರಬೇಕೆಂದು ನಿರ್ಧರಿಸಿದೆ. ಮತ್ತೊಂದು ನನ್ನನ್ನು ಕಾಡಿದ್ದು, ಇಂದಿನ ಮುದ್ರಣ ಮಾಧ್ಯಮ ಮತ್ತು ತಂತ್ರಜ್ಞಾನ ಮಾಧ್ಯಮದ ನಡುವೆ ನಡೆಯುತ್ತಿರುವ ನಾನೇ ಮೇಲೆನ್ನುವ ಸಂಘರ್ಷ. ನಮಗೆ ಪುಸ್ತಕದ ಸಾಹಿತ್ಯವೇ ಮನಸ್ಸನ್ನು ತಟ್ಟುತ್ತದೆ. ಆದರೆ, ತಂತ್ರಜ್ಞಾನ ಸಾಹಿತ್ಯಕ್ಕೆ ಇರಬಹುದಾದ ದೃಶ್ಯ ಸಾಧ್ಯತೆಯನ್ನು ಅಭಿವ್ಯಕ್ತಿಸುತ್ತದೆ. ಎರಡೂ ಇಂದಿನ ಅಗತ್ಯಗಳೇ. ಆಗ ನನಗನ್ನಿಸಿದ್ದು, ‘ನೋಟ್‌ಬುಕ್’ ಕಥಾಸಂಕಲನ ಎರಡೂ ಸಾಧ್ಯತೆಗಳನ್ನು ಒಳಗೊಂಡಿರಬೇಕು. ನನ್ನ ಸಂಕಲನದ ಕಥೆಗಳನ್ನು ಓದುಬಹುದು ಹಾಗೆಯೇ ಕೇಳಬಹುದು ಕೂಡ. ಏಕಕಾಲಕ್ಕೆ ಎರಡು ಸಾಧ್ಯತೆಗಳನ್ನು ಒಳಗೊಂಡ ಇದು ಓದುಗರ ಪ್ರಶಂಸೆ ಪಡೆದ ಕನ್ನಡದ ಮೊದಲ ಸೃಜನಶೀಲ ಕೃತಿ ಎನಿಸಿಕೊಂಡಿತು.

◆ **ಸೃಜನಶೀಲ ಲೇಖಕರು, ಶಿಕ್ಷಕರಾದಂತಹವರು ಮಕ್ಕಳಲ್ಲಿ ಸಾಹಿತ್ಯಪ್ರೀತಿಯನ್ನು ಹುಟ್ಟು ಹಾಕಲು ಏನೆಲ್ಲ ಕಾರ್ಯ ಯೋಜನೆಗಳನ್ನು ಹಾಕಿಕೊಳ್ಳಬಹುದು?**

ನಾವು ಸಾಹಿತ್ಯವನ್ನು ಹಲವು ಬಗೆಯಲ್ಲಿ ಪರಿಭಾವಿಸಿದ್ದೇವೆ. ಎಲ್ಲವೂ ಒಂದೇ ಆಗಿರುವುದಿಲ್ಲ.